
ಚಿತ್ರಕಥಾಪಟ

# ಚಿಟ್ಟೆಯ ಬಣ್ಣ

– ಟಿ. ಎಸ್. ನಾಗರಾಜ ಶೆಟ್ಟಿ



ಬಹಳ ಕಾಲದ ಹಿಂದಿನ ಮಾತು. ಆಗ ಕಾಮನಬಿಲ್ಲು ನೆಲದ ಮೇಲೇನೇ ಇರುತ್ತಿತ್ತು. ಏಳು ಬಣ್ಣಗಳಿಂದ ಹೊಳೆಯುವ ಅದರ ಮೈ ಆಕರ್ಷಕವಾಗಿರುತ್ತಿತ್ತು. ಅದನ್ನು ಎಷ್ಟು ಬಾರಿ ನೋಡಿದರೂ ಜನಕ್ಕೆ ಸಮಾಧಾನ ಆಗುತ್ತಿರಲಿಲ್ಲ. ಅದನ್ನು ನೋಡಲು ಮಕ್ಕಳಿಗೂ ಆಸೆ. ಬಿಡುವು ದೊರೆತರೆ ಸಾಕು ಅವರು ಅದರ ಬಳಿಗೆ ಓಡುತ್ತಿದ್ದರು.


ಶಿಕ್ಷಕರಲ್ಲಿ ನಿವೇದನೆ:
ಈ ವಿಶಿಷ್ಟ ಚಿತ್ರಕಥಾ ಪಟವನ್ನು ಮಕ್ಕಳಿಗೆ ತೋರಿಸುತ್ತಾ ಕಥೆಯನ್ನು ಓದಿ ಹೇಳಿ. ಹೇಳುತ್ತಲೇ ಕಥೆ ಆಧರಿಸಿ ಸಂವಾದ ನಡೆಸಿರಿ. ನಂತರ ಮಕ್ಕಳೇ ಸ್ವತಃ ಓದಲು ಪ್ರೋತ್ಸಾಹಿಸಿ.

ಚಿತ್ರಗಳು: ಮಲ್ಲಪ್ಪ ಅ. ನಾಟಿಕಾರ


ಜನವರಿ – ಫೆಬ್ರವರಿ – ಮಾರ್ಚ್ ೨೦೨೫

ಆರಂಭ ಯೋಜನೆ
Arambha 2024-25 Project
is Supported by Many
Individual Donors

ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
Dhwani Educational Resource Centre



ಒಂದು ಕಡೆಯಿಂದ ಕಾಮನ ಬಿಲ್ಲನ್ನು ಹತ್ತಿ, ಮತ್ತೊಂದು ಕಡೆಯಿಂದ ಇಳಿಯುವುದು ಮಕ್ಕಳಿಗೆ ಇಷ್ಟದ ಆಟವಾಗಿತ್ತು. ಅದರ ನುಣುಪು ಮೈ, ಕಣ್ಣಿಗೆ ಸುಂದರವೂ, ಆದ ಬೇರೆ ಬೇರೆ  ಬಣ್ಣಗಳು ಬಲು ಚೆನ್ನ. ಸೂರ್ಯನ ಬಿಸಿಲು ಮೇಲೆ ಬಿದ್ದಾಗಲಂತೂ ಅದರ ಚೆಲುವು ಬಣ್ಣಿಸಲು ಆಗದಷ್ಟು ಹೆಚ್ಚುತ್ತದೆ. ಏಳು ಬಣ್ಣಗಳ ಚಿತ್ತಾರ ನೋಡಲು ಬಲುಸೊಂಪು. ಇದನ್ನೇ 'ವರ್ಣಪಟಲ' ಎನ್ನುತ್ತೇವೆ.



ಮಕ್ಕಳನ್ನು ಕಾಮನಬಿಲ್ಲಿನಿಂದ ಹಿಂದಕ್ಕೆ ಕರೆತರುವುದು ಹಿರಿಯರಿಗೆ ಬಹಳ ಕಷ್ಟದ ಕೆಲಸವಾಯಿತು. ಅದರ ಬಳಿಗೆ ಹೋದ ಮಕ್ಕಳು ಮನೆಗೆ ಮರಳಲು ಸುಲಭವಾಗಿ ಒಪ್ಪುತ್ತಿರಲಿಲ್ಲ! ಊಟ ತಿಂಡಿಯೂ ಅವರಿಗೆ ಬೇಡವಾಗುತ್ತಿತ್ತು. ಇವರ ಕಾಟ ತಡೆಯಲು ಕಾಮನಬಿಲ್ಲಿಗೂ ಸಾಧ್ಯವಾಗಲಿಲ್ಲ.




ಎಲ್ಲರೂ ಒಟ್ಟಿಗೆ ಅದರ ಮೇಲಿಂದ ಜಾರುವಾಗ ಅದಕ್ಕೆ ನೋವಾಗುತ್ತಿತ್ತು.
ಹುಡುಗರ ಗದ್ದಲದಿಂದ ಕಿವಿ ಗಡಚಿಕ್ಕುತ್ತಿತ್ತು. ಕೆಲವು ಮಕ್ಕಳಂತೂ ಕಲ್ಲು,
ಕೋಲುಗಳಿಂದ ಬಡಿಯುತ್ತ ಆಟವಾಡುತ್ತಿದ್ದರು. ಆಗಂತೂ ಅದಕ್ಕೆ
ಪ್ರಾಣ ಹೋಗುವಂತಾಗುತ್ತಿತು.


ಕಾಮನಬಿಲ್ಲಿಗಾಗುವ ತೊಂದರೆಯನ್ನು ದೊಡ್ಡವರು ಗಮನಿಸುತ್ತಿರಲಿಲ್ಲ.
ದಾರಿಯಲ್ಲಿ ನೇರ ನಡೆಯುವ ಬದಲು ಕೆಲವರು
ಸೇತುವೆ ದಾಟುವಂತೆ ಅದನ್ನು ಹತ್ತಿ ಇಳಿದು ಹೋಗುತ್ತಿದ್ದರು. ಕೆಲವರು
ಕೊಳೆ ಮಾಡುತ್ತಿದ್ದರು. ಮತ್ತೆ ಕೆಲವರಂತೂ ತಾಂಬೂಲ ಉಗಿಯುತ್ತಿದ್ದರು.
ಅದರ ಮೇಲಿನ ವಾತಾವರಣ ಕೆಡತೊಡಗಿತು. ಈ ಜನ ಬುದ್ಧಿ
ಕಲಿಯುವುದು ಹೇಗಪ್ಪಾ? ಶುಚಿಯಾಗಿರುವುದು ಇವರಿಗೆ
ಬರುವುದಿಲ್ಲವೇ? ಎಂದು ನೊಂದುಕೊಳ್ಳುತ್ತಿತ್ತು.




ಕೆಲವು ದಿನ ಕಳೆದವು. ಪ್ರಾಣಿ ಪಕ್ಷಿಗಳು, ಕ್ರಿಮಿ ಕೀಟಗಳೆಲ್ಲ ಕೀಟಲೆ ಮಾಡತೊಡಗಿದವು. ಅವುಗಳ ಕಾಟ ತಡೆಯಲು ಅದಕ್ಕೆ ಆಗದಾಯಿತು. ಇನ್ನು ಈ ನೆಲದ ಮೇಲಿರುವುದು ಬೇಡ. ಆಕಾಶಕ್ಕೆ ಹೊರಟು ಹೋಗೋಣ ಎಂದು ತೀರ್ಮಾನ ತೆಗೆದುಕೊಂಡಿತು. ಒಂದು ರಾತ್ರಿ ಎಲ್ಲರೂ ನಿದ್ದೆಯಲ್ಲಿದ್ದಾಗ ಮೆಲ್ಲನೆ ಆಗಸಕ್ಕೆ ಹಾರಿತು.



ಆಗ ಒಂದು ಘಟನೆ ನಡೆದು ಹೋಯಿತು.
ಪುಟ್ಟ ಹುಳವೊಂದು ಅದರ ಮೇಲೆಯೇ ಉಳಿದುಕೊಂಡು ಬಿಟ್ಟಿತ್ತು!
ಅದು ಚಿಟ್ಟೆಯ ಮೊಟ್ಟೆ ಒಡೆದು ಹೊರಬಂದ ಒಂದು ಮರಿಯಾಗಿತ್ತು.
ಆ ದಿನ ಎಲೆಗಳನ್ನು ಚೆನ್ನಾಗಿ ತಿಂದಿತ್ತು.
ಹೊಟ್ಟೆ ತುಂಬಿ ನಿದ್ದೆ ಬಂದು ರಾತ್ರಿ ಮನೆಗೆ ಮರಳದೆ ಕಾಮನ
ಬಿಲ್ಲಿನ ಬೆನ್ನ ಮೇಲೇಯೇ ಮಲಗಿಬಿಟ್ಟಿತ್ತು!


ಹಗಲಾಗಿ ಅದಕ್ಕೆ ಎಚ್ಚರವಾದಾಗ ನಡೆದ ತಪ್ಪು ತಿಳಿಯಿತು. ಚಿಟ್ಟೆಯಮರಿಗೆ ತುಂಬ ಹೆದರಿಕೆ ಆಯಿತು.
ಮತ್ತೆ ಅಮ್ಮನ ಬಳಿಗೆ ಹೋಗುವುದು ಹೇಗೆ? ಆಕಾಶದಿಂದ ಭೂಮಿಗೆ ಜಿಗಿದರೆ ಬದುಕುವುದುಂಟೆ?
ದಿಕ್ಕು ತೋಚದೆ ಅದು ಜೋರಾಗಿ ಅಳತೊಡಗಿತು.
ಅದರ ಅಳು ಕೇಳಿ ಕಾಮನಬಿಲ್ಲು, "ಏನಾಯಿತು ಮರೀ?"
ಎಂದು ಪ್ರೀತಿಯಿಂದ ಮೆಲುದನಿಯಲ್ಲಿ ವಿಚಾರಿಸಿತು.
"ನೀನು ನನ್ನನ್ನು ಭೂಮಿಯ ಮೇಲಿಂದ ಎತ್ತಿಕೊಂಡು ಬಂದುಬಿಟ್ಟಿದ್ದೀಯ.
ನಾನು ಮತ್ತೆ ಅಮ್ಮನಲ್ಲಿಗೆ ಹೋಗುವುದು ಹೇಗೆ?" ಎಂದು ಮೂತಿ
ಮುಂದು ಮಾಡಿ ಬಿಕ್ಕತೊಡಗಿತು.




ಕಾಮನಬಿಲ್ಲಿಗೆ 'ಅಯ್ಯೋ' ಅನ್ನಿಸಿತು. ತನ್ನ ತಪ್ಪಿಗೆ ಈ ಮರಿಗೇಕೆ ಶಿಕ್ಷೆ ಎಂದು ಯೋಚಿಸಿ ಅದು ಒಂದು ವರ ಕೊಟ್ಟಿತು. "ನಿನಗೆ ನನ್ನ ಬಣ್ಣಗಳನ್ನು ಕೊಡುತ್ತೇನೆ. ಒಂದು ಸುಂದರ ಕೀಟವಾಗುವೆ. ಬಣ್ಣ ಬಣ್ಣದ ವಿನ್ಯಾಸದ ರೆಕ್ಕೆಗಳು ನಿನಗೆ ಮೂಡುತ್ತವೆ. ಆಗ ಹಾರುತ್ತ ಭೂಮಿಗೆ ಹೋಗು. ಪೆಟ್ಟು ಬೀಳುವುದಿಲ್ಲ. ಅಮ್ಮನನ್ನು ಸೇರಿಕೋ." ಎಂದು ಭರವಸೆ ನೀಡಿ ಅದರ ಮೈ ದಡವಿತು. ಆಗ ಮರಿಗೆ ಗಾಡ ನಿದ್ದೆ ಬಂದುಬಿಟ್ಟಿತು. ಅದರೆ ಸುತ್ತ ಒಂದು ಕೋಶ ನಿರ್ಮಾಣವಾಯಿತು.




ಎಚ್ಚರವಾದ ಮೇಲೆ ನೋಡುತ್ತದೆ, ಎರಡೂ ಪಕ್ಕಗಳಲ್ಲಿ ರೆಕ್ಕೆ ಮೂಡಿವೆ.
ಕೋಶವನ್ನು ಕಡಿದು ಕಡಿದು ಕತ್ತರಿಸಿ ಹೊರಬಂತು.
ಆಹಾ! ತಾನೀಗ ಎಷ್ಟು ಚಂದ ಆಗಿಬಿಟ್ಟಿದ್ದೇನೆ!
ಬಣ್ಣ ಬಣ್ಣದ ಎರಡು ರೆಕ್ಕೆ ಬಂದುಬಿಟ್ಟಿವೆ!
ಅಮ್ಮ ನನ್ನನ್ನು ಗುರುತು ಹಿಡಿಯುತ್ತಾಳೆಯೇ?
ಏನಾಯಿತೆಂದು ಹೇಳಿದರೆ ಆಕೆಗೆ ಗೊತ್ತಾಗುತ್ತದೆ."
ಎಂದು ಖುಷಿಯಿಂದ ಹಾರಲಾರಂಭಿಸಿತು.




ಅದರ ಸಂತೋಷ ನೋಡಿ ಕಾಮನ ಬಿಲ್ಲಿಗೂ
ಹರ್ಷವಾಯಿತು. “ಇನ್ನು ಭೂಮಿಗೆ ಹಾರುತ್ತಾ ಹೋಗು.”
ಎಂದು ಆಶೀರ್ವಾದ ಮಾಡಿತು.
“ನಾವು ಮತ್ತೆ ನಿನ್ನನ್ನು ನೋಡುವುದು ಹೇಗೆ?
ನೀನು ನಮಗೆ ಕಾಣಿಸುವ ಮಾತು ಕೊಟ್ಟರೆ ಮಾತ್ರ
ಹೋಗುತ್ತೇನೆ.” ಎಂದು ಚಿಟ್ಟೆ ತನ್ನ ಕರಾರನ್ನು
ಮುಂದಿಟ್ಟಿತು!

ಆ ಆಸೆಗೆ 'ಇಲ್ಲ' ಎನ್ನಲು ಕಾಮನ ಬಿಲ್ಲಿಗೆ ಮನಸ್ಸಾಗಲಿಲ್ಲ.
“ಆಗಲಿ ಮಳೆ ಬಂದು ನಿಂತಾಗ ಸೂರ್ಯ ಚೆನ್ನಾಗಿ ಹೊಳೆದರೆ
ನಾನು ಕಾಣಿಸುತ್ತೇನೆ.



ಈ ಮಾತಿನಿಂದ ಚಿಟ್ಟೆಗೆ
ಆನಂದವಾಯಿತು. ಅದು ಪಟಪಟನೆ
ರೆಕ್ಕೆ ಬಡಿಯುತ್ತ ಭೂಮಿಯ ಕಡೆಗೆ ಜಿಗಿಯಿತು.
ಚಿಟ್ಟೆಯ ಮರಿ ಬಣ್ಣದ ಚಿಟ್ಟೆ ಆದದ್ದು ಹೀಗೆ! *

**'ಧ್ವನಿ' ಶೈಕ್ಷಣಿಕ ಯೋಜನೆಗಳ ವ್ಯಾಪ್ತಿಯಲ್ಲಿ**
**ಉಚಿತ ಹಂಚಿಕೆಗಾಗಿ**

**ರಚನೆ: ಟಿ. ಎಸ್. ನಾಗರಾಜ ಶೆಟ್ಟಿ**

**ಆಕರ: ಕರಡಿ ರಸಾಯನ**

**ಪ್ರಕಾಶನ: ನಿರ್ಮಲ ಪ್ರಕಾಶನ, ತಿಪಟೂರು**

**ಮೊ.ನಂ: 9448979537**

**ಸಂಪರ್ಕ ಮಾಹಿತಿ**

**ಧ್ವನಿ**

ಶೈಕ್ಷಣಿಕ ಸಂಪನ್ಮೂಲ ಕೇಂದ್ರ
# ೭೬,'ಪುಷ್ಪಾಂಜಲಿ' ೩ನೇ ಅಡ್ಡರಸ್ತೆ
ಶಿವಗಿರಿ, ಧಾರವಾಡ–೫೮೦೦೦೭
ಮೊ. ೯೮ ೬೬೬ ೧೦೫೫
dhwanitrust@gmail.com
www.dhwanitrust.org

ಗಮನಿಸಿ : ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲ ವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರವುದು ಅಪೇಕ್ಷಣೀಯ.